# ಕೂಡುಕಟ್ಟು

## ಜಾನಪದ ಅಧ್ಯಯನ ಲೇಖನಗಳು



ಡಾ. ಪುರುಷೋತ್ತಮ ಬಿಳಿಮಲೆ

# ಕೂಡುಕಟ್ಟು

ಜಾನಪದ ಅಧ್ಯಯನ ಲೇಖನಗಳು

ಡಾ. ಪುರುಷೋತ್ತಮ ಬಿಳಿಮಲೆ

ಆನಂದಕಂದ ಗ್ರಂಥಮಾಲೆ
ಮಲ್ಲಾಡಿಹಳ್ಳಿ

## ನೆನಕೆಗಳು

ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರನ್ನು, ವಿಶ್ವವಿದ್ಯಾಲಯದ ನನ್ನೆಲ್ಲ ಗೆಳೆಯರನ್ನು, ಬೇರೆ ಬೇರೆ ಕಾರಣಗಳಿಗೆ ನಾನು ಇಷ್ಟ ಪಡುತ್ತಿರುವ ಕು.ಶಿ. ಹರಿದಾಸ್ ಭಟ್, ಕೆ. ಕುಶಾಲಪ್ಪ ಗೌಡ, ಅಮೃತ ಸೋಮೇಶ್ವರ, ಬಿ.ಎ. ವಿವೇಕ ರೈ, ಟಿ.ಜಿ. ಮುಡೂರು, ಹಿ.ಶಿ. ರಾಮಚಂದ್ರೇ ಗೌಡ, ಎಂ.ಪಿ. ಪ್ರಕಾಶ್, ಎಲ್. ಸಿದ್ಧನ ಗೌಡ, ಎಂ. ವೀರಪ್ಪ ಮೊಯಿಲಿ, ಎಚ್.ಜೆ. ಲಕ್ಕಪ್ಪ ಗೌಡ, ಎಂ.ಬಿ. ನೇಗಿನಹಾಳ, ಸೋಮಶೇಖರ ಇಮ್ರಾಪುರ, ಎಚ್.ಎಂ. ಮಹೇಶ್ವರಯ್ಯ, ಎಂ.ಎಂ. ಕಲಬುರ್ಗಿ, ಅಂಬಳಿಕೆ ಹಿರಿಯಣ್ಣ, ಬರಗೂರು ರಾಮಚಂದ್ರಪ್ಪ, ಎಂ. ಪ್ರಭಾಕರ ಜೋಶಿ, ಚಿನ್ನಪ್ಪ ಗೌಡ, ಸುಮಿಯೋ ಮೊರಿಜಿರಿ, ಚಂಪಾ, ಖಂಡೋಬ ಮತ್ತಿತರ ಹಿರಿಯರನ್ನು, ಪುಸ್ತಕವನ್ನು ಹೊರ ತರುತ್ತಿರುವ ಮಲ್ಲಾಡಿ ಹಳ್ಳಿಯ ಆನಂದಕಂದ ಗ್ರಂಥಮಾಲೆಯ ಸದಸ್ಯರನ್ನು ಮತ್ತು ಅದರ ಸಂಚಾಲಕರಾದ ಗೆಳೆಯ ರಾಘವೇಂದ್ರ ಪಾಟೀಲರನ್ನು, ಶೋಭನಾ, ಅನನ್ಯರನ್ನು ಈ ಸಂದರ್ಭದಲ್ಲಿ ಪ್ರೀತಿ ಗೌರವಗಳಿಂದ ನೆನೆಸಿಕೊಳ್ಳುತ್ತಿದ್ದೇನೆ.

ಪು.ಬಿ.

## ಪ್ರಕಾಶಕನ ಎರಡು ಮಾತುಗಳು ...

ಆನಂದಕಂದ ಗ್ರಂಥಮಾಲೆಯು ಕೇವಲ ಪುಸ್ತಕಗಳನ್ನು ಪ್ರಕಟಿಸುವ ಒಂದು ಪ್ರಕಾಶನ ಸಂಸ್ಥೆ ಮಾತ್ರ ಎಂತಾಗದೇ, ಒಂದು ಸಾಂಸ್ಕೃತಿಕ ಚಳುವಳಿಯಾಗಿ ಬೆಳೆಯಬೇಕೆನ್ನುವ ಆದರ್ಶವಿದೆ - ಆಸೆಯಿದೆ - ಉತ್ಸಾಹವಿದೆ .ಸಾಹಿತ್ಯ ಲೋಕದಲ್ಲಿ ಶಕ್ತಿ ಕೇಂದ್ರಗಳು ಕ್ರಿಯಾಶಾಲಿಯಾಗಿ, ತಮ್ಮ ತಮ್ಮ ಗುಂಪುಗಳಿಗೆ ನಿಷ್ಠರಾದವರನ್ನು ಮೇಲಕ್ಕೆತ್ತುವ ಕ್ರಿಯೆ ಅತ್ಯಂತ ಸೂಕ್ಷ್ಮವಾಗಿ ಏರ್ಪಡುವ ರೀತಿಯನ್ನು , ತಮಗೆ ನಿಷ್ಠರಾಗಿಲ್ಲದವರನ್ನು ಕೆಳಕ್ಕೊತ್ತುವ ರೀತಿಯನ್ನು , ಆನಂದಕಂದರ ಅನುಭವದ ಉದಾಹರಣೆಯಿಂದಲೇ ನಾವು ಅರಿಯಬಹುದಾಗಿದೆ .ಸಾಂಸ್ಕೃತಿಕ ಅನಾರೋಗ್ಯ ಕೂಪಗಳಂತಿರುವ ಈ ಶಕ್ತಿಕೇಂದ್ರಗಳಿಗೆ ತಲೆಬಾಗದ ಆತ್ಮಾಭಿಮಾನಿ ಲೇಖಕರು, ಪರಂಪರೆಯ ಎಲ್ಲ ಸಂದರ್ಭಗಳಲ್ಲಿಯೂ ಇದ್ದೇ ಇರುತ್ತಾರೆ .ಇಂಥ ಅಭಿಮಾನೀ ತತ್ವನಿಷ್ಠ ಲೇಖಕರನ್ನು ಒಳಗೊಳ್ಳುವ ಮಾನುಷ ಜಾಲವೊಂದನ್ನು ನಿರ್ಮಿಸುವ ಆದರ್ಶವನ್ನು ಆನಂದಕಂದರ ಹೆಸರಿನ ಈ ಪ್ರಕಾಶನ ಮಾಲೆ ಹೊಂದಿದೆ . ಈ ಉದ್ದೇಶಗಳಿಗೆ ಅತ್ಯಂತ ನಿಷ್ಠರಾಗಿ ಕಾರ್ಯ ಚಟುವಟಿಕೆಗಳನ್ನು ಏರ್ಪಡಿಸುವ ಭರವಸೆಯನ್ನು ಗ್ರಂಥಮಾಲೆಯು ನೀಡುತ್ತದೆ.

o

ಗ್ರಂಥಮಾಲೆಯ ಮೊದಲ ಕಟ್ಟಿನಲ್ಲಿ ಗೆಳೆಯ ಡಾ: ಪುರುಷೋತ್ತಮ ಬಿಳಿಮಲೆಯವರು ತಮ್ಮ **ಕೂಡು ಕಟ್ಟು** ಪುಸ್ತಕವನ್ನು ಪ್ರಕಟಿಸಲು ಅನುಮತಿ ನೀಡಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ .ಪರಂಪರೆಯ ಬಗೆಗಿನ ಪ್ರೀತಿ , ಮತ್ತು ಅದರ ಬಗೆಗಿನ ನಿರ್ಮಮದ ವಿಮರ್ಶಾದೃಷ್ಟಿ ,ಇವುಗಳೆರಡೂ ಬಿಳಿಮಲೆಯವರ ಈ ಸಂಕಲನದ ಲೇಖನಗಳಲ್ಲಿ ಸಾಮಾಜಿಕ ಆರೋಗ್ಯದ , ವಿವೇಕದ ನೆಲೆಯಲ್ಲಿ ಮೇಳೈಸಿವೆ .ಆನಂದಕಂದರು ಜಾನಪದ ಸಂಸ್ಕೃತಿಯ - ಸಂಶೋಧನೆಯ ಬಗೆಗೆ ಅಪಾರ ಆಸಕ್ತಿಯನ್ನು ಹೊಂದಿದವರಾಗಿದ್ದು ,ಅವರ ಹೆಸರಿನ ಈ ಗ್ರಂಥಮಾಲೆಯ ಮೊದಲ ಕಟ್ಟಿನಲ್ಲಿಯೇ ಈ ನಿಟ್ಟಿನ ಅಪೂರ್ವ ಲೇಖನಗಳ ಗುಚ್ಛವೊಂದನ್ನು ಪ್ರಕಟಿಸುವ ಅವಕಾಶ ದೊರೆತದ್ದು ಸಂತೋಷ ತಂದಿದೆ .ಇಂಥ ಸಂತೋಷವನ್ನು ಒದಗಿಸಿದ ಗೆಳೆಯರಾದ ಡಾ: ಪುರುಷೋತ್ತಮ ಬಿಳಿಮಲೆಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ . ಹಾಗೆಯೇ ಈ ಗ್ರಂಥವನ್ನು ಪ್ರೀತಿಯಿಂದ ಸ್ವೀಕರಿಸಲು ಕನ್ನಡದ ಪ್ರಜ್ಞಾವಂತರಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ.

# ಪರಿವಿಡಿ


*ನೆನಕೆಗಳು*
*ಪ್ರಕಾಶಕರ ಮಾತು*

೦೧. ಮೈಲಾರ: ಮದುವೆ, ವಾಸ್ತು, ಜಾತ್ರೆ ಮತ್ತು ಚರಿತ್ರೆ / ೧
೦೨. ಬೊಜ್ಜ: ಸಾವಿನ ಸಾಂಕೇತಿಕ ಪ್ರತಿನಿಧೀಕರಣ / ೩೯
೦೩. ಪಂಚಭೂತ ಪರಿಕಲ್ಪನೆ: ಜಾನಪದದಲ್ಲಿ / ೬೦
೦೪. ಸಾಂಸ್ಕೃತಿಕ ಅನನ್ಯತೆ: ಹುಡುಕಾಟದ ಸಮಸ್ಯೆಗಳು / ೭೦
೦೫. ಜನಪದ ಸಾಹಿತ್ಯ: ಚರಿತ್ರೆ, ಪುರಾಣ, ಮನಸ್ಸು / ೯೦
೦೬. ಕರ್ನಾಟಕ ಜಾನಪದ: ಲೋಕದೃಷ್ಟಿಯ ಪರಿಶೀಲನೆ / ೧೦೮
೦೭. ಅರಣ್ಯ ಜಾನಪದ: ಪರಿಕಲ್ಪನೆಯ ಕುರಿತ ಚರ್ಚೆ / ೧೨೩
೦೮. ಯಕ್ಷಗಾನ: ಪ್ರದರ್ಶನ ವಿಶ್ಲೇಷಣೆ / ೧೩೪
೦೯. ಜನಪದ ಆಟ: ರಚನೀಕರಣ ಮತ್ತು ಪ್ರದರ್ಶನ / ೧೫೦
೧೦. ಜಾನಪದ ದಾಖಲಾತಿ: ಕೆಲವು ಅನುಮಾನಗಳು / ೧೭೧
೧೧. ಜಾನಪದ: ಸಂವಹನ ಮಾದರಿಗಳು / ೧೭೮
೧೨. ಜಾನಪದ: ವೈಜ್ಞಾನಿಕ ವಿಶ್ಲೇಷಣೆ / ೧೮೬
೧೩. ಜನ ಸಂಸ್ಕೃತಿ: ಸಂಘರ್ಷ ಮತ್ತು ಸಮನ್ವಯ / ೧೯೬
೧೪. ಜನಪದ ಕತೆ: ನಾಗಮಂಡಲದ ಅಭ್ಯಾಸ / ೨೦೩
೧೫. ಮಹಿಳಾ ಜಾನಪದ: ಮಹಿಳಾ ಶಕ್ತಿಮೂಲಗಳ ಶೋಧ / ೨೧೭

# ಒಂದು

# ಮೈಲಾರ: ಮದುವೆ, ವಾಸ್ತು, ಜಾತ್ರೆ ಮತ್ತು ಚರಿತ್ರೆ

೧

ಕರ್ನಾಟಕದ ಜನಪದ ಸಂಪ್ರದಾಯಗಳಲ್ಲೆಲ್ಲ ಮೈಲಾರನ ಸಂಪ್ರದಾಯ ತುಂಬಾ ವಿಶಿಷ್ಟವಾದುದು. ಆ ಸಂಪ್ರದಾಯ ಎಷ್ಟು ಸಂಕೀರ್ಣವಾಗಿದೆ ಎಂದರೆ, ಅದಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ಒಂದು ಚೌಕಟ್ಟಿಗೆ ತಂದು ವಿವರಿಸಲು ಸಾಧ್ಯವಿಲ್ಲ. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಹಿರೇಮೈಲಾರದಲ್ಲಿ ಪ್ರತಿ ವರ್ಷ ಭಾರತ ಹುಣ್ಣಿಮೆಯಂದು ನಡೆಯುವ ಕಾರಣಿಕೋತ್ಸವದಲ್ಲಿ ಏನಿಲ್ಲವೆಂದರೂ ಕನಿಷ್ಠ ನಾಲ್ಕು ಲಕ್ಷ ಜನ ಸೇರುತ್ತಾರೆ. ಇಷ್ಟು ಬೃಹತ್ತಾದ ಜಾತ್ರೆಯೊಂದರಲ್ಲಿ ಕ್ಷೇತ್ರ ಕಾರ್ಯ ನಡೆಸಿ ವಿವರ ಸಂಗ್ರಹಿಸುವುದು ಕೂಡಾ ಅಸಾಧ್ಯವಾದ ಸಂಗತಿಯಾಗಿದೆ. ಮೈಲಾರ ದೇವಳದ ಸುತ್ತ ಇರುವ ಬಗೆ ಬಗೆಯ ಗುಡಿಗಳು, ಅಲ್ಲಿ ನಡೆಯುವ ವಿವಿಧ ಆಚರಣೆಗಳು ಮತ್ತು ನಂಬಿಕೆಗಳನ್ನೆಲ್ಲ ಒಂದು ಕೇಂದ್ರಕ್ಕೆ ತಂದು ಜೋಡಿಸಿ ಮಂಡಿಸುವುದು ಯಾರಿಗಾದರೂ ಒಂದು ಸವಾಲೇ ಸರಿ. ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಭಾಷಾಶಾಸ್ತ್ರಜ್ಞರು, ಇತಿಹಾಸತಜ್ಞರು ಮತ್ತು ಜಾನಪದ ವಿದ್ವಾಂಸರೆಲ್ಲ ಒಟ್ಟು ಸೇರಿ ಹಲವು ವರ್ಷಗಳವರೆಗೆ ದುಡಿದರೂ ಮೈಲಾರ ಸಂಪ್ರದಾಯ ಪೂರ್ತಿ ಅರ್ಥವಾದೀತೆಂದು ಹೇಳಲು ನನಗೆ ಧೈರ್ಯ ಸಾಲದು. ಇಷ್ಟಿದ್ದರೂ ಎಂ.ಬಿ. ನೇಗಿನಹಾಳ (೧೯೮೪, ೧೯೯೨) ಮತ್ತು ಸೊಂತೈಮಿರ್ ಅವರು (1974, 1978, 1984, 1985, 1987, 1989, 1993) ಮೈಲಾರ ಸಂಪ್ರದಾಯದ ಬಗೆಗೆ ನಡೆಸಿದ ಅಧ್ಯಯನಗಳು ತುಂಬ ಮಹತ್ತ್ವದ್ದಾಗಿವೆ. ನೇಗಿನಹಾಳರು ಮೈಲಾರನ ಕುರಿತಾದ ಹಾಡುಗಳನ್ನು ಸಂಪಾದಿಸಿ ಕೊಟ್ಟಿರುವರಲ್ಲದೆ, ಮೈಲಾರ ಸಂಪ್ರದಾಯದ ಕುರಿತಾಗಿರುವ ಐತಿಹ್ಯ, ಪುರಾಣ, ಸಂಕೇತಗಳನ್ನೆಲ್ಲ ತುಂಬ ಶ್ರಮವಹಿಸಿ ಸಂಗ್ರಹಿಸಿಕೊಟ್ಟಿದ್ದಾರೆ. ಸೊಂತೈಮಿರ್ ಅವರು ವಲಸೆಗಾರ ಕುರುಬರ ಚಾರಿತ್ರಿಕ ಹಿನ್ನೆಲೆಯಲ್ಲಿ ಈ ಸಂಪ್ರದಾಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

ಇವರಿಬ್ಬರ ಪ್ರಯತ್ನಗಳಿಗಿಂತ ಭಿನ್ನವಾದ ವಿಶ್ಲೇಷಣಾ ವಿಧಾನವೊಂದನ್ನು ಪ್ರಸ್ತುತ ಪ್ರಬಂಧದಲ್ಲಿ ಅನುಸರಿಸಲು ಯತ್ನಿಸಲಾಗಿದೆ. ಮೈಲಾರನಿಗೆ ಸಂಬಂಧಿಸಿದ ಖಂಡಕಾವ್ಯಗಳಲ್ಲಿ ಆತ ಕನಿಷ್ಠ ಮೂರು ಜನರನ್ನು, ಮೂರು ರೀತಿಯಲ್ಲಿ ಮದುವೆಯಾಗುತ್ತಾನೆ. ಮೈಲಾರದೇವರಿಗೆ ಬೇರೆ ಬೇರೆ ಕಾಲದಲ್ಲಿ ಕಟ್ಟಲಾದ ಗುಡಿಗಳಲ್ಲಿ ಆತನ ಮೂವರು ಹೆಂಡತಿಯರಿಗೆ ಪ್ರತ್ಯೇಕ ಸ್ಥಾನಗಳನ್ನು ಕಲ್ಪಿಸಲಾಗಿದೆ, ಜೊತೆಗೆ ಆ ಮೂವರಿಗೆ ಬೇರೆ ಬೇರೆ ರೀತಿಯ ಶಿಲ್ಪಗಳನ್ನೂ ಕೊರೆಯಲಾಗಿದೆ. ಪ್ರತಿವರ್ಷ ನಡೆಯುವ ಮೈಲಾರನ ಕಾರಣಿಕೋತ್ಸವದಲ್ಲಿ, ಮೈಲಾರನ ಕುರಿತಾಗಿರುವ ಕಾವ್ಯದ ಕೆಲವು ಭಾಗಗಳನ್ನು ಪುನರಭಿನಯಿಸಿ ತೋರಿಸಲಾಗುತ್ತದೆ. ಈ ಮದುವೆ, ವಾಸ್ತು-ಶಿಲ್ಪ, ಆಚರಣೆಗಳ ನಡುವೆ ಇರಬಹುದಾದ ಸಂಬಂಧವನ್ನು ಅದರ ಚಾರಿತ್ರಿಕ ಸಂದರ್ಭದಲ್ಲಿರಿಸಿ ವಿವರಿಸಲು, ವ್ಯಾಖ್ಯಾನಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಅರ್ಥದಲ್ಲಿ ಇದು ಬೇರೆ ಬೇರೆ ಅಧ್ಯಯನ ಶಿಸ್ತುಗಳನ್ನು ಒಂದೆಡೆಗೆ ತರುವ ಪ್ರಯತ್ನವೂ ಹೌದು, ಚೂರು ಚೂರಾಗಿ ಬೇರೆ ಬೇರೆ ಕಡೆ ಹರಡಿ ಹೋಗಿರುವ ವಿಷಯಗಳನ್ನು ಸಂಗ್ರಹಿಸಿಕೊಡುವ ಕೆಲಸವೂ ಹೌದು.

## ೧.೧. ಮೈಲಾರನ ಮದುವೆಗಳು

ಮೈಲಾರನು ಕನಿಷ್ಠ ಮೂರು ಮದುವೆಗಳನ್ನು ಮಾಡಿಕೊಂಡಂತೆ ಮೈಲಾರನ ಕುರಿತಾದ ಕಾವ್ಯಗಳಿಂದ ತಿಳಿದು ಬರುತ್ತದೆ. ಆತನ ಹೆಂಡತಿಯರೆಂದರೆ ಗಂಗಿಮಾಳವ್ವ, ಕುರುಬತ್ತೆವ್ವ ಮತ್ತು ಕೊಮಾಲಿ. ಇವರ ಮದುವೆ ಪ್ರಸಂಗಗಳು ಸ್ಥೂಲವಾಗಿ ಇಂತಿವೆ.

ಮೈಲಾರನು ಗಂಗಿಮಾಳವ್ವನನ್ನು ಮದುವೆಯಾದ ಕತೆಯು ತುಂಬಾ ಜನಪ್ರಿಯವಾಗಿದೆ. ಈ ಕತೆಯ ಅನೇಕ ಪಾಠಗಳು ಕೂಡಾ ಲಭ್ಯವಿವೆ. ಅವುಗಳ ಪ್ರಕಾರ ಮೈಲಾರನಿಗೆ ಮದುವೆಯಾಗಬೇಕೆಂಬ ಆಸೆ ಹುಟ್ಟಿ, ಹೆಣ್ಣು ಹುಡುಕುತ್ತಾ ಊರೂರು ಅಲೆಯುತ್ತಾನೆ. ಜನರು 'ತಿರುಪತಿ ತಿಮ್ಮ ಶೆಟ್ಟಿ' ಯ ಕಡೆಗೆ ಬೆರಳು ತೋರಿಸುತ್ತಾರೆ. ಮೈಲಾರನು ತಿರುಪತಿಗೆ ಹೋದಾಗ, ತಿಮ್ಮ ಶೆಟ್ಟಿಯು ಮಲಗಿದ್ದ. ಮೈಲಾರನು ತನ್ನ ಕೈಯಲ್ಲಿರುವ ಢಮರುಗವನ್ನು ಬಾರಿಸಿ ಶೆಟ್ಟಿಯನ್ನು ಎಬ್ಬಿಸುತ್ತಾನೆ. ಏಳು ಉಪ್ಪರಿಗೆಯ ಕಿಟಕಿಯಿಂದ ಶೆಟ್ಟಿ ಇಣಕಿ ನೋಡುತ್ತಾನೆ. 'ಯಾರೋ ಭಿಕ್ಷೆಗೆ ಬಂದಿದ್ದಾರೆ, ಭಿಕ್ಷೆ ಕೊಟ್ಟು ಕಳಿಸಿ' ಎಂದು ಮಕ್ಕಳಿಗೆ ಹೇಳಿ ಶೆಟ್ಟಿ ಮತ್ತೆ ಮಲಗುತ್ತಾನೆ. ಆಗ ಶೆಟ್ಟಿಯ ದೊಡ್ಡಮಗಳು ಗಂಗಮ್ಮ ಮೈಲಾರನೆಂಬ ಗೊರವನಿಗೆ ಭಿಕ್ಷೆ ನೀಡಲು ಉಪ್ಪರಿಗೆ ಮೆಟ್ಟಿಲಿಳಿದು ಅಂಗಳಕ್ಕೆ ಬರುತ್ತಾಳೆ. ಗೊರವನ ಜೋಳಿಗೆಗೆ ಭಿಕ್ಷೆ ಸುರಿಯುವಾಗ ಆಕೆಯ ಚೆಲುವಿಗೆ ಮನಸೋತ ಮೈಲಾರನು ಗಂಗಮ್ಮನ ಕೈಹಿಡಿದುಕೊಳ್ಳುತ್ತಾನೆ. ಹೆದರಿದ ಗಂಗಮ್ಮ ಏಳು ಉಪ್ಪರಿಗೆಯ ಜನರಿಗೂ ಕೇಳುವಂತೆ ಚೀರುತ್ತಾಳೆ. ಬೆದರಿದ ತಿಮ್ಮ ಉಪ್ಪರಿಗೆಯಿಂದ ಮತ್ತೆ ಇಣುಕುತ್ತಾನೆ. ಮಗಳ

ಕೈಹಿಡಿದ ಗೊರವನ ಕಂಡು ದಂಗಾಗುತ್ತಾನೆ, ಸಿಟ್ಟಾಗುತ್ತಾನೆ. ದಢ ದಢನೆ ಮೆಟ್ಟಿಲಿಳಿದು ಬಂದು ಗೊರವನ ಮುಂದೆ ನಿಲ್ಲುತ್ತಾನೆ. "ಏಳು ಕೋಟಿ ಹೊನ್ನು ಕೊಟ್ಟು ಮಗಳನ್ನು ಕರೆದುಕೊಂಡು ಹೋಗು" ಎನ್ನುತ್ತಾನೆ. ಶೆಟ್ಟಿಯ ಹಣದಾಸೆ ಕಂಡು ಮೈಲಾರನಿಗೆ ನಗುಬರುತ್ತದೆ. 'ಮದುವೆ ಮಾಡಿಕೊಡು, ಊರಿಗೆ ಹೋದ ಮೇಲೆ ಏಳುಕೋಟಿ ಕಳಿಸಿಕೊಡುತ್ತೇನೆ' ಎನ್ನುತ್ತಾನೆ.

ತಿಮ್ಮ ಶೆಟ್ಟಿ ಈಗ ಹಣದಾಸೆಗೆ ಬಲಿಬೀಳುತ್ತಾನೆ. "ಮದುವೆ ಖರ್ಚು ನಿನ್ನದೇ" ಎನ್ನುತ್ತಾನೆ, ಮೈಲಾರನಿಗೆ. ಅದಕ್ಕೆ ಒಪ್ಪದ ಗೊರವನು "ಇಲ್ಲ, ಈಗ ದುಡ್ಡು ತಂದಿಲ್ಲ, ಖರ್ಚು ನೀನೇ ಮಾಡಬೇಕು, ಅದಕ್ಕೆ ಒಳ್ಳೆಯ ಬಡ್ಡಿ ಸೇರಿಸಿ ಆನಂತರ ಹಿಂದೆ ಕೊಡುತ್ತೇನೆ" ಎನ್ನುತ್ತಾನೆ. ಈ ಸಲ ಬಡ್ಡಿಯಾಸೆಗೆ ಬಲಿ ಬಿದ್ದ ತಿಮ್ಮನು ಅದಕ್ಕೂ ಒಪ್ಪುತ್ತಾನೆ. ತಂಗಿಯನ್ನು ಮೈಲಾರನಿಗೆ ಮದುವೆ ಮಾಡಿಕೊಡುತ್ತಾನೆ. ಮದುವೆಗೆ ಬಂದವರ ಮುಯ್ಯಿ ತಿಮ್ಮನಿಗೆ ಸೇರದಂತೆ ಮೈಲಾರ ಎಚ್ಚರಿಕೆ ವಹಿಸುತ್ತಾನೆ. ದಿಬ್ಬಣಸಹಿತ ಮೈಲಾರ ಹಿಂದಿರುಗುವಾಗ, ತಗಲಿದ ಹಾದಿ ಖರ್ಚನ್ನೂ ತಿಮ್ಮನೇ ವಹಿಸಿಕೊಳ್ಳುತ್ತಾನೆ. ಹೀಗೆ ಪೈಸೆ ಖರ್ಚಿಲ್ಲದೆ ಮೈಲಾರನು ತಿಮ್ಮ ಶೆಟ್ಟಿಯ ಮಗಳಾದ ಗಂಗಮ್ಮನನ್ನು ಮದುವೆ ಮಾಡಿಕೊಂಡು ಹಿಂದಿರುಗುತ್ತಾನೆ.

ಮದುವೆ ಕಳೆದು ಬಹಳ ಕಾಲವಾದರೂ ಮೈಲಾರನು 'ಏಳುಕೋಟಿ' ಹೊನ್ನು, ಮದುವೆ ಖರ್ಚು ಮತ್ತು ಅದರ ಬಡ್ಡಿಯನ್ನು ತಿಮ್ಮಪ್ಪನಿಗೆ ಹಿಂದಿರುಗಿಸುವುದಿಲ್ಲ. ತಿಮ್ಮ ಜನ ಕಳಿಸಿದಾಗ "ಭಾರತ ಹುಣ್ಣಿಮೆಯಲ್ಲಿ ಕಾರಣಿಕ ನಡೆಯುತ್ತದೆ. ಆಗ ಬೀಳುವ ಕಾಣಿಕೆ ಹಣದಿಂದ ನಿನ್ನಸಾಲ ಮುರಿದುಕೋ" ಎಂದು ಹೇಳಿ ಕಳಿಸುತ್ತಾನೆ. ಆ ಪ್ರಕಾರ ತಿಮ್ಮನು ಕಾರಣಿಕಕ್ಕೆ ಬರುತ್ತಾನೆ. ಆದರೆ ಈ ಸಲ ಮೈಲಾರನು ಮಾಯದ ಭಂಡಾರ ತೂರಿ ಕಾಣಿಕೆ ಹಣವನ್ನು ಮಾಯಮಾಡುತ್ತಾನೆ. "ಅಸಲೂ ಇಲ್ಲ, ಬಡ್ಡಿಯೂ ಇಲ್ಲ" ಎಂದು ತಿಮ್ಮ ಗೋಳಾಡುತ್ತಾನೆ. ಜನರು ನ್ಯಾಯ ಮಾಡುತ್ತಾರೆ. 'ತಪ್ಪು ಮೈಲಾರನದಲ್ಲ' ಎಂದು ತೀರ್ಮಾನಿಸುತ್ತಾರೆ. ಆದರೂ ಮೈಲಾರನಿಗೆ ಸೇರಿದ ಹುಣಿಸೆ ತೋಪನ್ನು ಒಂದು ವರುಷದ ಮಟ್ಟಿಗೆ ತಿಮ್ಮನಿಗೆ ಒಪ್ಪಿಸುವುದೆಂದೂ, ಅದರಿಂದ ಬಂದ ಉತ್ಪತ್ತಿಯಿಂದ ತಿಮ್ಮ ಶೆಟ್ಟಿಯು ತನ್ನ ಸಾಲವನ್ನು ತೀರಿಸಿಕೊಳ್ಳಬೇಕೆಂದೂ ಜನರು ಆದೇಶಿಸುತ್ತಾರೆ. ಇಬ್ಬರೂ ಅದಕ್ಕೆ ಒಪ್ಪುತ್ತಾರೆ. ಹುಣಿಸೆ ತೋಪಿನ ಮೇಲ್ವಿಚಾರಣೆಯ ಅಧಿಕಾರವನ್ನು ತಿಮ್ಮ ವಹಿಸಿಕೊಳ್ಳುತ್ತಾನೆ. ಹುಣಿಸೆ ತೋಪಿನಲ್ಲಿ ಚೆನ್ನಾಗಿ ಹಣ್ಣು ಬೆಳೆಯುತ್ತದೆ. ತಿಮ್ಮ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಾನೆ. ಇನ್ನೇನು ಹಣ್ಣು ಕೊಯ್ಯುವ ದಿವಸವೂ ಬರುತ್ತದೆ. ಆ ದಿವಸ ತಿಮ್ಮನು ಮಗಳ ಮನೆಗೆ ಹೋಗುತ್ತಾನೆ. ಗಂಗಮ್ಮ ಅಪ್ಪನಿಗೆ ಬಿಸಿ ನೀರಿನ ಸ್ನಾನ ಮಾಡಿಸುತ್ತಾಳೆ. ಒಳ್ಳೆಯ ಊಟ ಹಾಕುತ್ತಾಳೆ. ಶೆಟ್ಟಿಯ ಹೊಟ್ಟೆ ತಣ್ಣಗಾಗುತ್ತದೆ. ಚೆನ್ನಾಗಿ ನಿದ್ದೆ ಮಾಡಿಬಿಡುತ್ತಾನೆ. ಕಾಯುತ್ತಾ ಕುಳಿತಿದ್ದ ಮೈಲಾರ ಹುಣಿಸೆ ಹಣ್ಣನ್ನೆಲ್ಲ ಹೊಡೆದು ಕೊಂಡು

ಬಿಡುತ್ತಾನೆ. ತಿಮ್ಮನಿಗೆ ಎಚ್ಚರವಾಗಿ ನೋಡಿದಾಗ ತೋಪೆಲ್ಲಾ ಖಾಲಿ. ಆಕಾಶ ಭೂಮಿ ಒಂದು ಮಾಡುವಂತೆ ಗೋಳಾಡುತ್ತಾನೆ. ಮತ್ತೆ ಊರಿನ ಜನ ಸೇರಿ ನ್ಯಾಯ ಮಾಡುತ್ತಾರೆ. ಈ ಸಲವೂ ಅವರು 'ಮೈಲಾರನದು ತಪ್ಪಿಲ್ಲ' ಎನ್ನುತ್ತಾರೆ. ಕೋಪಗೊಂಡ ತಿಮ್ಮನು "ಇನ್ನು ಮುಂದೆ ನಿನ್ನ ಸಹವಾಸ ಬೇಡ, ನಿನ್ನ ಜನರು ಏಳುಕೋಟಿ, ಏಳುಕೋಟಿ ಎಂದು ಹೇಳುತ್ತಾ ತಿರುಗುತ್ತಿರಲಿ, ಅವರಿಗೆ ಬಡತನ ತಪ್ಪದಿರಲಿ" ಎಂದು ಶಾಪ ಕೊಡುತ್ತಾನೆ. ಮೈಲಾರ ನಕ್ಕು ಸುಮ್ಮನಾಗುತ್ತಾನೆ.

ಈಗಾಗಲೇ ಹೇಳಿರುವಂತೆ ಮೈಲಾರ-ಗಂಗಮ್ಮನ ಮದುವೆಯ ಕುರಿತಾದ ಈ ಕತೆಗೆ ಅನೇಕ ಪಾಠಗಳಿವೆ. ಕೆಲವು ಪಾಠಗಳ ಪ್ರಕಾರ ಗಂಗಮ್ಮಳು ತಿಮ್ಮಶೆಟ್ಟಿಯ ತಂಗಿಯೇ ವಿನಾ ಮಗಳಲ್ಲ. ಮೈಲಾರನ ಮರಾಠೀ ಆವೃತ್ತಿಯಾದ ಖಂಡೋಬನ ಹೆಂಡತಿಯ ಹೆಸರು'ಮಾಳಮ್ಮ'. ಜನನುಡಿಯಲ್ಲಿ ಆಕೆ 'ಮಾಳಸಾದೇವಿ'- 'ಮಾಳಚಿ' ಎಂದೇ ಪ್ರಸಿದ್ಧಳು. ಈಕೆಯ ಅಪ್ಪನ ಹೆಸರುಕೂಡಾ ತಿಮ್ಮ ಶೇಟ. ತಿಮ್ಮ ಶೇಟನು ಲಿಂಗಾಯತ ಬಣಜಿಗರವನಾಗಿದ್ದು, ವ್ಯಾಪಾರಿವೃತ್ತಿಯಲ್ಲಿ ತನ್ನನ್ನು ತೊಡಗಿಸಿ ಕೊಂಡಿದ್ದನೆಂದು ಮರಾಠೀ ಜನಪದ ಸಾಹಿತ್ಯ ಹೇಳುತ್ತದೆ (Sontheimer 1989). ಇದೇ ನಂಬುಗೆಯು ಅಹಮ್ಮದ ನಗರದ ನೇವಾಸೆಯಲ್ಲಿಯೂ ಇದೆ ಎಂಬುದನ್ನು ಎಂ.ಬಿ.ನೇಗಿನಹಾಳರು ದಾಖಲಿಸಿದ್ದಾರೆ (೧೯೯೨:೨೦೧). ಈ ಎಲ್ಲ ಪಠ್ಯಗಳಲ್ಲಿಯೂ ಸಮಾನವಾಗಿರುವ ಅಂಶವೆಂದರೆ, ಮೈಲಾರನ ಮಾವ ತಿಮ್ಮಶೆಟ್ಟಿ ಎಂಬುದು. ಆತ ಹಣದಾಸೆಯುಳ್ಳವನು ಎಂಬುದು ಕೂಡಾ ಎಲ್ಲ ಪಠ್ಯಗಳಲ್ಲಿಯೂ ಕಂಡು ಬರುವ ಇನ್ನೊಂದು ಅಂಶವಾಗಿದೆ. ಶ್ರೀಮಂತ ವರ್ತಕನೊಬ್ಬನ ಮಗಳನ್ನು ಮೈಲಾರ ವಂಚಿಸಿ ಮದುವೆಯಾಗಿದ್ದಾನೆ ಎಂಬುದು ಸದ್ಯಕ್ಕೆ ಇಲ್ಲಿ ನಮಗೆ ಮುಖ್ಯವಾದ ವಿಚಾರವಾಗಿದೆ.

ಮೈಲಾರನ ಇನ್ನೊಂದು ಮದುವೆಯು ಕುರುಬತ್ತೆವ್ವನೊಡನೆ ನಡೆಯುತ್ತದೆ. ಈ ಮದುವೆಯು ಗಂಗಮ್ಮ ನೊಡನೆ ನಡೆದ ಮದುವೆಗಿಂತ ತೀರ ಬೇರೆಯಾಗಿದೆ. ಇಲ್ಲಿ ಮೈಲಾರನು ಬೇಟೆಗೆಂದು ಕಾಡಿಗೆ ತೆರಳುತ್ತಾನೆ. ನಾಲ್ಕಾರು ದಿನ ಕಳೆದು ಆತ ಹಿಂದಿರುಗಿ ಬರುತ್ತಾನೆ. ಬರುವಾಗ ಅವನ ಗಲ್ಲದ ಮೇಲೆ ಗಾಯಗಳಿರುತ್ತವೆ. ಗಲ್ಲದ ಗಾಯ, ತುಟಿಯ ಕೆಂಪು ಕಂಡು ಮೈಲಾರನ ಮನೆಯ ಹೆಂಡತಿ ಗಂಗಮ್ಮ ಗಾಬರಿಯಾಗುತ್ತಾಳೆ. ಸಂಶಯದಿಂದಲೇ ಕಾರಣ ಕೇಳುತ್ತಾಳೆ. ಆಗ ಮೈಲಾರ ಹೇಳುತ್ತಾನೆ.

"ಬ್ಯಾಸಿಗಿ ಬಿಸಿಲಿಗಿ ಬರುತ್ತಿದ್ದೆ ಗಂಗವ್ವ
ಗಿಡುಗನ ಬ್ಯಾಟೀಯ ಆಡಿದ್ದೆ ಗಂಗವ್ವ
ಎಳಿಮೃಗವು ಎನಮೇಲೆ ಹಾರೀತು ಗಂಗವ್ವ
ಅದೆ ಗಾಯ ಮೈಮ್ಯಾಲೆ ಕೇಳೆಲೆ ಗಂಗವ್ವ
ಹಣ್ಣಾದ್ರೆ ತಿಂದರೆ ಸೊನೆ ಸೋಕಿ ಗಂಗವ್ವ
ಸೊನೆ ಸೋಕಿ ತುಟಿಯಲ್ಲಿ ಗಾಯವೆ ಗಂಗವ್ವ"